CC-0. In Public Domain. Digitized by eGangotri

ಪತಿತ ಪಾವನ ಶಾರದಾ



ಶ್ರೀರಾಮಕೃಷ್ಣಾಶ್ರಮ
ಮೈಸೂರು-20

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪತಿತ ಪಾವನೆ ಶಾರದಾ

ಸೋಮನಾಥಾನಂದ

ಶ್ರೀರಾಮಕೃಷ್ಣಾಶ್ರಮ
ಮೈಸೂರು-20

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಥಮ ಮುದ್ರಣ — ೧೯೮೮
ದ್ವಿತೀಯ ಮುದ್ರಣ — ೧೯೯೬

ಅಧ್ಯಕ್ಷರು :
ಶ್ರೀರಾಮಕೃಷ್ಣಾಶ್ರಮ
ಮೈಸೂರು-೫೦

ಮುದ್ರಕರು :
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಸಯ್ಯಾಜಿರಾವ್ ರೋಡ್,
ಮೈಸೂರು.

Sri Vidyabharati Book Centre, Sringeri

CC-O. In Public Domain. Digitized by eGangotri

ಪತಿತ ಪಾವನೆ ಶಾರದಾ

ಭಗವಾನ್ ಶ್ರೀರಾಮಕೃಷ್ಣರು ಸಾಧನೆಯಲ್ಲಿ ನಿರತರಾಗಿದ್ದಾಗ, ಅವರು ಯಾವುದೋ ಒಂದು ದೃಷ್ಟಿಯಿಂದ ಭಗವಂತನನ್ನು ನೋಡಿ ಕೃತಾರ್ಥರಾದವರಲ್ಲ. ಭಗವಂತನ ಬಳಿಗೆ ಯಾವ ಯಾವ ಮಾರ್ಗಗಳಿವೆಯೋ ಅವುಗಳ ಮೂಲಕವಾಗಿ ಒಂದೇ ಗುರಿ ಎಡೆಗೆ ಸೇರಿದರು. ವೇದಗಳ ಕಾಲದಲ್ಲಿ ಹೇಳಿದ " ಏಕಸಂತ್ವಿಪ್ರಾ ಬಹುಧಾ ವದಂತಿ ", ಎಂಬುದನ್ನು ತಮ್ಮ ಜೀವನದಲ್ಲಿ ಅನುಭವ ಮಾಡಿಹೋದರು. ಅವರ ಮಾತು ಕತೆ, ನಡೆನುಡಿ ಇವುಗಳನ್ನು ಅವರ ಸುತ್ತ ಇದ್ದ ಜನರು ತಿಳಿದುಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಅವರನ್ನು ಒಬ್ಬ ಹುಚ್ಚು ಪೂಜಾರಿ ಎಂದು ಪರಿಗಣಿಸಿದರು. ಇಂತಹ ವ್ಯಕ್ತಿಯ ಕೈಯಿಂದ ಪೂಜೆ ಮಾಡಿಸುವುದೇ ಒಂದು ದೊಡ್ಡ ಅನಾಚಾರ ಎಂದು ಮಥುರನಾಥನಿಗೆ ದಕ್ಷಿಣೇಶ್ವರ ದೇವಸ್ಥಾನವನ್ನು ನೋಡಿಕೊಳ್ಳುತ್ತಿದ್ದವರು ದೂರು ಕೊಟ್ಟರು. ಆದರೆ ಮಥುರ ಶ್ರೀರಾಮಕೃಷ್ಣರನ್ನು ಜೆನ್ನಾಗಿ ಬಲ್ಲವನು. ನಾನೇ ಪ್ರತ್ಯಕ್ಷ ಅವರನ್ನು ನೋಡುವುದಕ್ಕೆ ಬರುತ್ತೇನೆ. ಅನಂತರ ಏನು ಮಾಡಬೇಕು ಎಂಬುದನ್ನು ಹೇಳುತ್ತಾನೆ. ಮಥುರನಾಥ ಒಂದು ದಿನ ಶ್ರೀರಾಮಕೃಷ್ಣರಿಗೆ ತಿಳಿಸದೆ ಅವರು ಪೂಜೆ ಮಾಡುವ ಸಮಯದಲ್ಲಿ ಅವರನ್ನು ನೋಡಲು ಬಂದ. ಶ್ರೀರಾಮಕೃಷ್ಣರು ಭಗವತಿಯ ಪೂಜೆಯಲ್ಲಿ ತಲ್ಲೀನರಾಗಿದ್ದರು ಅವರಿಗೆ ಸುತ್ತಮುತ್ತಲ ಪ್ರಜ್ಞೆಯೇ ಇಲ್ಲ. ತಾನು ಲಯಿತ, ದೇವಿ ಲಯಿತು. ಪ್ರಪಂಚದಲ್ಲಿ ಅವಳ ವಿನಃ ಮತ್ತೇನೂ ಕಾಣಿಸಲಿಲ್ಲ. ಅನಂತರ ದೇವಿಯ ಎದುರಿಗೆ ಒಂದು ಭಕ್ತಿಪೂರಿತ ಹಾಡನ್ನು ಹಾಡಿಸುತ್ತಿರುತ್ತಾರೆ. ಭಕ್ತಿಯಾವೇಶಾವರಣ

Sri Vidyabharathi Book Centre, Sringeri

CC-O. In Public Domain. Digitized by eGangotri
ವೆಲ್ಲ ಕಂಪಿಸಿತು. ಪಂಥುರನಾಥನ ಹೃದಯವನ್ನು ಸ್ಪರ್ಶ ಮಾಡಿತು. ಧನ್ಯರಾಣಿ ರಾಸ್ಮಣಿ, ಅವಳು ಕಟ್ಟಿದ ದೇವಸ್ಥಾನದಲ್ಲಿ ಈಗ ಭಗವತಾರಣಿ ನೆಲೆಸಿದ್ದಾಳೆ ಎಂದು ಹೊರಗೆ ಹೋಗಿ ದೇವಸ್ಥಾನದ ಪರಿಚಾರಕರಿಗೆಲ್ಲಾ, ನೀವು ಸುಮ್ಮನೆ ಇರಿ, ಶ್ರೀರಾಮಕೃಷ್ಣರು ತಮಗೆ ತೋರಿದ ರೀತಿಯಲ್ಲಿ ಪೂಜೆ ಮಾಡಲಿ, ದೇವಿ ಅದನ್ನು ಸ್ವೀಕರಿಸುವಳು ಎಂದನು.

ಆದರೂ ಶ್ರೀರಾಮಕೃಷ್ಣರು ಹುಚ್ಚಾಗಿ ಹೋಗಿರುವರು ಎಂಬ ವದಂತಿ ಅಲ್ಲಿ ಇಲ್ಲಿ ಹೋಗಿ ಕಾಮಾರಪುಕುರವನ್ನೂ ಮುಟ್ಟಿತು. ಶ್ರೀರಾಮಕೃಷ್ಣರ ತಾಯಿ ಚಂದ್ರಮಣಿ ದೇವಿಗೂ ಮುಟ್ಟಿತು. ಅವಳು ತಲ್ಲಣಗೊಂಡಳು. ತನ್ನ ಮಗ ಶ್ರೀರಾಮಕೃಷ್ಣರು ಹುಚ್ಚಾಗಿ ಹೋಗಿರುವರೆ ಎಂದು ಅಲ್ಲಿಂದ ಶ್ರೀರಾಮಕೃಷ್ಣರಿಗೆ ಒಂದು ಕಾಗದವನ್ನು ಬರೆಸಿದರು. ಈಚೆಗೆ ನಿನ್ನ ಆರೋಗ್ಯ ಚೆನ್ನಾಗಿಲ್ಲವಂತೆ, ನೀನು ಕಾಮಾರಪುಕುರಕ್ಕೆ ಬಂದರೆ ಇಲ್ಲಿ ಪ್ರವೀಣರಾದ ವೈಧ್ಯರು, ಮಂತ್ರವಾದಿಗಳು ಇದ್ದಾರೆ. ಅವರು ನಿನಗೆ ಚಿಕಿತ್ಸೆಮಾಡುತ್ತಾರೆ, ತಕ್ಷಣವೇ ಕಾಮಾರಪುಕುರಕ್ಕೆ ಬಾ ಎಂದು.

ಶ್ರೀರಾಮಕೃಷ್ಣರಿಗೆ ಮೊದಲಿನಿಂದಲೂ ತಾಯಿ ಚಂದ್ರಮಣಿ ದೇವಿಯ ಮೇಲೆ ಭಕ್ತಿ ಗೌರವ. ಕಾಗದ ನೋಡಿದ ತಕ್ಷಣವೇ ಚಂದ್ರಮಣಿ ಸೇವಿಯನ್ನು ನೋಡಲು ಕಾಮಾರಪುಕುರಕ್ಕೆ ಹೊರಟರು. ಅಲ್ಲಿ ಶ್ರೀರಾಮಕೃಷ್ಣರು ತನ್ನ ತಾಯಿ ಮತ್ತು ಇತರ ಬಂಧುಗಳು ಸ್ನೇಹಿತರೊಂದಿಗೆ ಮಾತನಾಡುತ್ತಿದ್ದಾಗ ಅವರಲ್ಲಿ ಯಾವ ಹುಚ್ಚೂ ಕಾಣಲಿಲ್ಲ. ಆದರೆ ಕೆಲವು ವೇಳೆ ದೇವರ ಹಾಡುಗಳನ್ನು ಹಾಡುತ್ತಿದಾಗ ಅದರಲ್ಲಿ ತನ್ಮಯರಾಗುತ್ತಿದ್ದರು ಪ್ರಪಂಚದ ಅರಿವೆಯೇ ಇಲ್ಲದಂತೆ. ಚಂದ್ರಮಣಿದೇವಿ

Sri Vidyabharathi Book Centre, Sringeri

CC-O. In Public Domain. Digitized by eGangotri
ಆಲೋಚನೆ ಮಾಡಿದರು. ಆದೇನೂ ಅಂಥ ಹುಚ್ಚಲ್ಲ. ಆದರೂ ಎಲ್ಲರಂತೆ ಇರದೆ ಅವರು ಬೇರೊಂದು ರೀತಿ ಇದ್ದರೆ ಅದು ವಿಚಿತ್ರವಾಗುವುದು. ಹತ್ತೂ ಜನರಂತೆ ಆದರೂ ಏತಕ್ಕೆ ಇರಬಾರದು? ಹತ್ತಿರ ಇದ್ದ ಬಂಧುಬಳಗದವರು ಆಲೋಚನೆ ಮಾಡಿದರು. ಅದಕ್ಕೆಲ್ಲ ಒಂದು ಮದ್ದು ಇದೆ. ಅದೇ ಶ್ರೀರಾಮಕೃಷ್ಣರಿಗೆ ಮದುವೆ ಮಾಡಿಸುವುದು. ಆಗಲೇ ಶ್ರೀರಾಮಕೃಷ್ಣರಿಗೆ ಇಪ್ಪತ್ತಾರು ವರ್ಷ. ಸಾಧಾರಣ ಮನೆಯಲ್ಲಿ ಇದ್ದರೆ ಈ ವಯಸ್ಸಿಗೆ ಮದುವೆಯಾಗಿ ಒಂದೆರಡು ಮಕ್ಕಳಿಗೆ ತಂದೆಯಾಗುತ್ತಿದ್ದರು. ಅವರಿಗೆ ಮದುವೆ ಮಾಡಿಬಿಟ್ಟರೆ ದೇವರ ಮೇಲೆ ಹೋಗುತ್ತಿರುವ ಮನಸ್ಸು ಹೆಂಡತಿಯ ಕಡೆಗೆ ಬಂದು, ಅವರೂ ಹತ್ತರಲ್ಲಿ ಹನ್ನೊಂದರಂತೆ ಆಗುತ್ತಾರೆ. ಆದರೆ ಮದುವೆಗೆ ಒಂದು ಹೆಣ್ಣು ಸಿಕ್ಕಬೇಕಲ್ಲ. ಕನ್ಯಾನ್ವೇಷಣೆಗೆ ಬಹು ಶ್ರಮ ಪಟ್ಟರೂ ಯಾವ ಹುಡುಗಿಯೂ ಸಿಕ್ಕಲಿಲ್ಲ. ಮದುವೆಯ ವಿಚಾರವನ್ನು ಶ್ರೀರಾಮಕೃಷ್ಣರಿಗೆ ತಿಳಿಸಿರಲಿಲ್ಲ. ಗೊತ್ತಾದರೆ ಎಲ್ಲಿ ಓಡಿಹೋಗುವರೋ ಎಂಬ ಅಂಜಿಕೆ. ಆದರೂ ಶ್ರೀರಾಮಕೃಷ್ಣರು ಚಂದ್ರಮಣಿದೇವಿಯನ್ನು ಕಂಡಾಗ ಯಾವುದೋ ದುಃಖದ ಭಾರದಿಂದ ಅವರು ಕೊರಗುತ್ತಿರುವಂತೆ ಕಂಡರು. ಕಾರಣವೇನಿರಬೇಕೆಂದು ಕೇಳಿದಾಗ ವಿಧಿ ಇಲ್ಲದೆ ಚಂದ್ರಮಣಿದೇವಿ "ನಿನಗೆ ಒಂದು ಮದುವೆ ಮಾಡಬೇಕೆಂದು ಹೆಣ್ಣಿಗಾಗಿ ಹುಡುಕುತ್ತಿರುವೆವು, ಆದರೆ ಯಾವ ಹುಡುಗಿಯೂ ಸಿಕ್ಕಲಿಲ್ಲ" ಎಂದರು. ಆ ಮಾತನ್ನು ಶ್ರೀರಾಮಕೃಷ್ಣರು ಕೇಳಿದರು. ಆದರೆ ಓಡಿಹೋಗಲಿಲ್ಲ. "ನೀವು ನನಗೆ ಮದುವೆ ಮಾಡಬೇಕೆಂದು ಇಚ್ಛೆ ಇದ್ದರೆ ಎಲ್ಲೆಲ್ಲೋ ಹುಡುಕಿದರೆ ಹೆಣ್ಣು ಸಿಕ್ಕುವುದೇಂ? ನೀವು ಕಾಮಾರಪುಕುರಕ್ಕೆ ಬನ್ನಿ, ನಾನಲ್ಲಿಗೆ ಬಂದು ನಿಮಗಾಗಿ ಒಬ್ಬ ಹುಡುಗಿಯನ್ನು ತೋರಿಸುವೆನು" ಎಂದರು.

Siddhanta eGangotri Gyaan

CC-O. In Public Domain. Digitized by eGangotri
ಯಲ್ಲಿ ರಾಮಚಂದ್ರ ಮುಖ್ಯೋಪಾಧ್ಯಾಯರ ಮನೆಗೆ ಹೋಗಿ ಆಲ್ಲಿ ನನಗಾಗಿ ಒಂದು ಹೆಣ್ಣು ವಿಾಸಲಾಗಿದೆ" ಎಂದರು. ಈ ಹುಡುಗನ ಮಾತಿನಲ್ಲಿ ಮೊದಲು ನಂಬಿಕೆ ಬರಲಿಲ್ಲ. ಆದರೂ ಇಷ್ಟೊಂದು ಹುಡುಕಾಡಿರುವಾಗ ಜಯರಾಮುಬಾಟ ಯಲ್ಲಿ ರಾಮಚಂದ್ರ ಮುಖ್ಯೋಪಾಧ್ಯಾಯರ ಮನೆಗೆ ಹೋಗಿ ನೋಡೋಣ ಎಂದು ಹೆಣ್ಣಿನ ತಂದೆಗೆ ಕೆಲವರು ಹೊರಟರು. ರಾಮಚಂದ್ರ ಮುಖ್ಯೋಪಾಧ್ಯಾಯರ ಮನೆಯಲ್ಲಿ ಶ್ರೀರಾಮಕೃಷ್ಣರಿಗೆ ಮದುವೆ ಮಾಡಬೇಕೆಂದು ಇರುವೆವು ನಿಮ್ಮ ಮನೆಯಲ್ಲಿ ಒಂದು ಹೆಣ್ಣು ಇದೆಯಂತೆ ನೀವು ಕೊಡುತ್ತೀರಾ ಎಂದು ಕೇಳಿದರು. ಅವರು ಒಪ್ಪಿಕೊಂಡರು. ನಿಮ್ಮ ಹುಡುಗಿಯನ್ನು ಸ್ವಲ್ಪ ತೋರಿಸಿ ಎಂದಾಗ ಒಳಗೆ ಆಡುತ್ತಿದ್ದ ಶಾರದಾದೇವಿಯನ್ನು ಕರೆತಂದರು. ಅವಳು ಐದು ವರ್ಷದ ಪುಟ್ಟ ಹುಡುಗಿ. ಆಗ ಶ್ರೀರಾಮಕೃಷ್ಣರಿಗೆ ಇಪ್ಪತ್ತಮೂರು ವಯಸ್ಸು. ಈ ಹುಡುಗಿಯಿಂದ ಶ್ರೀರಾಮಕೃಷ್ಣರ ದೇವರ ಹುಚ್ಚನ್ನು ಬಿಡಿಸುವುದಕ್ಕೆ ಸಾಧ್ಯವೇ ಎಂದು ಯೋಚಿಸಿದರು. ಹಿಂದಿನ ಕಾಲದಿಂದಲೂ ಮಹಾ ತಪಸ್ವಿಗಳನ್ನು ಪ್ರಪಂಚದ ಕಡೆಗೆ ಬರುವಂತೆ ಮಾಡುವುದಕ್ಕೆ ರಂಭೆ, ಊರ್ವಶಿ, ತಿಲೋತ್ತಮೆ ಮೊದಲಾದ ಸುಂದರ ಯುವತಿಯರನ್ನು ಕಳುಹಿಸುತ್ತಿದ್ದರು. ಈ ಐದು ವರ್ಷದ ಮಗುವಿಗೆ ಶ್ರೀರಾಮಕೃಷ್ಣರೊಡನೆ ಮದುವೆಮಾಡಿದರೆ ದೇವರ ಹುಚ್ಚನ್ನು ಬಿಡಿಸಲು ಸಾಧ್ಯವೇ ಎಂದು ಶಂಕಿಸಿದರು ಆದರೂ ಕೆಲವು ಜಾಣ ಹೆಂಗಸರು ಈಗ ಶಾರದೆಗೆ ಐದು ವರ್ಷ ಒಂದು ಹತ್ತು ಹನ್ನೆರಡು ವರ್ಷವಾಗಲಿ ಅವಳು ಯಾರನ್ನಾದರೂ ಮರುಳು ಮಾಡಬಲ್ಲಳು ಎಂದು ಯೋಚಿಸಿದರು. ಕಾಮಾರ
Sri Vidyabharathi Book Centre, Sringeri
ಪುಕುರದಿ ಲೌಹಾ ಮನೆಯ ಹೆಂಗಸರ ಆಭರಣಗಳನ್ನು

CC-O. In Public Domain. Digitized by eGangotri

ಮದುವೆಗೆ ಎರವಲಾಗಿ ತೆಗೆದುಕೊಂಡು ಧಾರೆ ಎರೆದರು. ಮದುವೆಯಾದ ಮೇಲೆ ಶ್ರೀಶಾರದಾದೇವಿ ಆಭರಣಗಳನ್ನು ಕೊಡುವ ಸಮಯ ಬಂದಾಗ ಮದುವೆ ಸಮಯದಲ್ಲಿ ಇಟ್ಟಿರುವ ಒಡವೆಗಳೆಲ್ಲಾ ತನಗೆ ಸೇರಿದ್ದು ಅದನ್ನು ಕೊಡುವುದಿಲ್ಲವೆಂದು ಹಠ ಹಿಡಿದಳು. ಸಂಧಿಗ್ಧ ಪರಿಸ್ಥಿತಿಯಿಂದ ಪಾರಾಗಲು ಶ್ರೀರಾಮಕೃಷ್ಣರೇ ಶಾರದಾದೇವಿ ನಿಪ್ರೇಮಾಡುತ್ತಿದ್ದಾಗ ಅವರಿಗೆ ಸ್ವಲ್ಪವೂ ಎಚ್ಚರವಿಲ್ಲದಂತೆ ನಗ ಕಳಚಿ ತಾಯಿಯ ಕೈಯಲ್ಲಿ ಕೊಟ್ಟು ಅವರ ಮನೆಯವರಿಗೆ ಕಳುಹಿಸಿಕೊಡು ಎಂದರು. ಮಾರನೆಯದಿನ ಶಾರದಾದೇವಿ ಎದ್ದರು. ನಗಗಳೆಲ್ಲಾ ಮಾಯವಾಗಿತ್ತು. ಅವರು ಅಳತೊಡಗಿದರು. ಆ ಸಮಯದಲ್ಲಿ ಚಂದ್ರಮಣಿದೇವಿ ಸೊಸೆಯ ಕಣ್ಣೀರನ್ನು ಒರೆಸಿ "ನನ್ನ ಮಗ ನಿನಗೆ ಅನರ್ಘ್ಯವಾದ ಒಡವೆಗಳನ್ನು ಮಾಡಿಸಿ ಹಾಕುತ್ತಾನೆ" ಎಂದು ಸಮಾಧಾನ ಮಾಡಿದರು.

ಶ್ರೀರಾಮಕೃಷ್ಣರಿಗೆ ಮದುವೆ ಮಾಡಿದ್ದು ಏತಕ್ಕೆ? ಅವರನ್ನು ಸಂಸಾರಕ್ಕೆ ಕಟ್ಟಿಹಾಕುವುದಕ್ಕಾಗಿ, ಆದರೆ ಅದು ಫಲಿಸಿತೇ? ಫಲಿಸಲಿಲ್ಲ. ಮುಂಜಿ ದೇವರಮೇಲೆ ಶ್ರೀರಾಮಕೃಷ್ಣರು ಹುಚ್ಚಾಗಿದ್ದರು. ಅವರನ್ನು ಶ್ರೀಶಾರದಾದೇವಿಯೊಂದಿಗೆ ಮದುವೆ ಮಾಡಿದ ಮೇಲೆ ಆ ಹುಚ್ಚು, ದೇವೋನ್ಮಾದ ಶಾರದಾದೇವಿಗೂ ತಾಕಿತು.

ಶ್ರೀರಾಮಕೃಷ್ಣರು ಶಾರದಾದೇವಿಯವರನ್ನು ಮದುವೆಯಾದರು. ಆದರೆ ಅದೊಂದು ಅಪರೂಪ ದಾಂಪತ್ಯ ಸಂಬಂಧ. ಹಿಂದಿನಿಂದ ಭಗವಂತನಿಗಾಗಿ ಹೆಣ್ಣನ್ನು ಬಿಟ್ಟವರು ಇದ್ದರು. ಕೆಲವರು ಮದುವೆಯಾಗದೇ ನೇರ ದೇವರಕಡೆಗೆ ಹೋದವರಿದ್ದರು. ಶಂಕರಾಚಾರ್ಯರು ಅಂಥವರು. ಮತ್ತೆ ಕೆಲವರು

Sri Vidyabharati Book Centre, Sringeri

CC-O. In Public Domain. Digitized by eGangotri

ಮೊದಲು ಮದುವೆಯಾಗಿ ಕೆಲವು ವರ್ಷಗಳಮೇಲೆ ವೈರಾಗ್ಯ ಬಂದು ಹೆಂಡತಿಯನ್ನು ಬಿಟ್ಟವರಿದ್ದರೂ. ಬುದ್ಧ, ರಾಮಾನುಜ, ಇಂಥವರೇ ನಿದರ್ಶನ. ಆದರೆ ಶ್ರೀರಾಮಕೃಷ್ಣರು ಭಗವತ್ ಸಾಕ್ಷಾತ್ಕಾರವನ್ನು ಪಡೆದಮೇಲೆ ಮದುವೆಯಾದರು. ಪ್ರಾಪಂಚಿಕತೆ ಅವರಲ್ಲಿ ಲವಲೇಶವೂ ಇರಲಿಲ್ಲ, ಇಂತಹ ವ್ಯಕ್ತಿ ಹೆಣ್ಣಿನಿಂದ ಯಾವ ಸುಖಪಡಲು ಮದುವೆಯಾದರು ? ಸುಖ ಪಡೆಯುವುದಕ್ಕಲ್ಲ. ಜನರೆದುರಿಗೆ ಒಂದು ದೈವೀ ಸಂಸಾರದ ಆದರ್ಶವನ್ನು ನೀಡಲು ಅವರು ಬಂದರು. ಆದರ್ಶದ ಮಟ್ಟಕ್ಕೆ ಏರಲು ಎಲ್ಲರಿಗೂ ಸಾಧ್ಯವಿಲ್ಲದೇ ಇರಬಹುದು. ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. "ಉಚ್ಚ ಆದರ್ಶ ಇಟ್ಟುಕೊಂಡಿರುವವನು ನೂರು ತಪ್ಪುಗಳನ್ನು ಮಾಡಿದರೆ ಅದನ್ನು ಇಟ್ಟುಕೊಳ್ಳದೇ ಇರುವವನು ಸಾವಿರಾರು ತಪ್ಪುಗಳನ್ನು ಮಾಡುತ್ತಾನೆ". ನಾವೆಲ್ಲ ಶ್ರೀರಾಮಕೃಷ್ಣರ ಮತ್ತು ಶಾರದಾದೇವಿಯ ಆದರ್ಶವನ್ನು ಇಟ್ಟುಕೊಂಡಿದ್ದರೆ ಅದರಂತೆ ಆಗಲು ಸಾಧ್ಯವಿರದೇ ಇರಬಹುದು. ಆದರೂ ಈಗ ಇರುವುದಕ್ಕಿಂತ ಮೇಲೇರಲು ಸಾಧ್ಯ. ಈ ಆದರ್ಶದ ಏಣಿಯನ್ನು ನಮಗಾಗಿ ಅವರು ನಿರ್ಮಿಸಿರುವರು.

ಶ್ರೀಮಾತೆಗೆ ಸುಮಾರು ಹದಿನಾರು ವರ್ಷ ಇರುವಾಗ ಶ್ರೀರಾಮಕೃಷ್ಣರೊಂದಿಗೆ ಇರಲು ದಕ್ಷಿಣೇಶ್ವರಕ್ಕೆ ಬಂದರು. ಕೆಲವು ದಿನಗಳಾದಮೇಲೆ "ನೋಡು ನಾನು ನಿನ್ನನ್ನು ಆತ್ಮ ಸಾಕ್ಷಿಯಾಗಿ ಕೈಹಿಡಿದಿರುವೆನು. ನಾನು ನಿನಗೆ ವಿರೋಧವಾಗಿ ಇರಲು ಇಚ್ಛಿಸುವುದಿಲ್ಲ. ನಾನು ಸಾಧನೆ ಮಾಡಿ ಬ್ರಹ್ಮಾಂಡವನ್ನು ನಿರ್ಮಿಸಿರುವ ಭಗವತಿಯನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವೆನು. ನನಗೆ ಚರಾಚರ ವಸ್ತುಗಳಲ್ಲಿ ಅವಳೇ ಕಾಣುತ್ತಿದ್ದಾಳೆ. ನೀನು ನಿನ್ನಲ್ಲಿಯೂ ಅವಳನ್ನೇ ಕಾಣುತ್ತಿರು

Sri Vidyabharathi Book Centre, Sringeri

CC-O. In Public Domain. Digitized by eGangotri
ವೆನು. ಆದರೆ ನೀನು ನನ್ನನ್ನು ಮದುವೆಯಾಗಿರುವೆ. ನಿನಗೆ ವಿರೋಧವಾಗಿರಲು ಇಷ್ಟಪಡುವುದಿಲ್ಲ. ನೀನು ಸಂಸಾರ ಸುಖವನ್ನು ಅನುಭವಿಸಲು ಕಾತರಳಾದರೆ ಅದನ್ನು ನಾನು ಕೊಡಬಲ್ಲೆ. ಅಥವಾ ನನ್ನಂತೆ ನೀನೂ ಭಗವತಿಯ ಉಪಾಸಕಳಾಗಿ ಅವಳನ್ನು ಕಾಣಲು ಇಚ್ಛಿಸಿದರೆ ಅದನ್ನೂ ಕೊಡಬಲ್ಲೆ" ಎಂದರು. ಶ್ರೀಶಾರದಾದೇವಿಯವರು ಸಂಸಾರ ಸುಖವನ್ನು ಇಚ್ಛಿಸಿದ್ದರೆ ತಾವು ಆ ಕೆಸರಿಗೂ ಬೀಳುವುದಕ್ಕೆ ಸಿದ್ಧನಾಗಿರುವೆ ಎಂದರು. ಶ್ರೀರಾಮಕೃಷ್ಣರನ್ನು ಒಂದು ಅವತಾರ ವ್ಯಕ್ತಿಯನ್ನಾಗಿ ಮಾಡುವುದು ಅಥವಾ ಅವರನ್ನು ಸಾಧಾರಣ ಪೂಜಾರಿಯನ್ನಾಗಿ ಮಾಡುವುದು ಶ್ರೀಶಾರದಾದೇವಿಗೆ ಸಾಧ್ಯವಾಗಿತ್ತು. ಆದರೆ ಶ್ರೀರಾಮಕೃಷ್ಣರನ್ನು ಸಂಸಾರಕ್ಕೆ ಬೀಳದಂತೆ ಅವರ ಎತ್ತರಕ್ಕೆ ತಾವೂ ಏರಲು ಸಹಾಯ ಮಾಡಿ ಎನ್ನುತ್ತಾರೆ. ತನ್ನ ಗಂಡನ ಧರ್ಮವೇ ತನ್ನ ಧರ್ಮ ಎಂದು ಸಾಂಸಾರಿಕ ಸುಖವನ್ನು ಬಲಿದಾನ ಮಾಡಿದರು. ಶ್ರೀರಾಮಕೃಷ್ಣರ ಆಧ್ಯಾತ್ಮ ಗೌರೀಶಂಕರ ಶಿಖರವನ್ನು ನೋಡಿದಾಗ ಅವಕ್ಕಾಗುವೆವು. ಆದರೆ ನಾವು ಸ್ವಲ್ಪ ವಿಚಾರಮಾಡಿ ನೋಡಿದರೆ ಶ್ರೀಶಾರದಾದೇವಿಯವರ ಮಹಿಮೆ ಗೊತ್ತಾಗುವುದು. ಆ ತಾಯಿ ಮಹಾತಾಯಿ, ತನ್ನ ಬಾಳನ್ನೇ ಅಸ್ತಿಭಾರವಾಗಿಟ್ಟು ಶ್ರೀರಾಮಕೃಷ್ಣರು ಮೇಲಕ್ಕೇರಲು ಸಹಾಯಕರಾದರು. ಮುಕ್ತಿಗಾಗಿ, ದೇವರಿಗೆ ಎಲ್ಲವನ್ನೂ ತ್ಯಜಿಸಿದವರಿದ್ದಾರೆ. ಆದರೆ ಶ್ರೀರಾಮಕೃಷ್ಣರು ಮುಕ್ತಿಯ ನಂತರ ಹೆಂಡತಿ ಇಚ್ಛೆಪಟ್ಟರೆ ತಾವು ಸಂಸಾರದ ರಸಾತಳಕ್ಕೂ ಬೀಳಲು ಸಿದ್ಧರಾಗಿದ್ದರು. ಇವರ ಬಾಳನ್ನು ನೋಡಿದಾಗ ಆ ಪುಣ್ಯಾತ್ಮರಿಬ್ಬರ ಎತ್ತರಬಿತ್ತರಗಳು ನಮಗೆ ಅರಿವಾಗುತ್ತವೆ.

ಶ್ರೀರಾಮಕೃಷ್ಣರು ಸಂಸಾರದ ಮನೆ ಕಲಸಗಳಿಂದ ಹಿಡಿದು

Sri Vidyabharathi Book Centre, Sringeri

CC-O. In Public Domain. Digitized by eGangotri
ಜಪ. ತಪ ಸಮಾಧಿಗಳನ್ನೆಲ್ಲ ಶ್ರೀಶಾರದಾದೇವಿಯವರಿಗೆ ಕಲಿಸುತ್ತಾರೆ. ಶ್ರೀರಾಮಕೃಷ್ಣರ ನಂತರ ಗುರುಸ್ಥಾನದಲ್ಲಿ ನಿಲ್ಲಿಸುತ್ತಾರೆ. ಯಾವ ಯಾವ ಸಾಧಕರಿಗೆ ಯಾವ ಯಾವ ಆದರ್ಶಗಳನ್ನು ಕೊಡಬೇಕೆನ್ನುವ ಮಂತ್ರಗಳನ್ನೂ ಅವರು ಹೇಳುತ್ತಾರೆ. ಗುರುದೇವ ಶ್ರೀರಾಮಕೃಷ್ಣರೇ ನನಗೆ ಇದನ್ನು ಕಲಿಸಿದರು. ಇದನ್ನು ನಂಬಿ ಮುಂದುವರಿಯುವವರು ಭಗವಂತನಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳುವರು. ಇದರಲ್ಲಿ ಲವಲೇಶವೂ ಸಂದೇಹವಿಲ್ಲ, ಎಂದು ಶ್ರೀಮಾತೆಯವರು ಹೇಳುತ್ತಿದ್ದರು. ಅವರಿಗೆ ಈ ಶಕ್ತಿ ಎಲ್ಲಿ ಹೇಗೆ ಬಂತು ಎಂದು ನಾವು ವಿಚಾರಿಸಬಹುದು. ಶ್ರೀರಾಮಕೃಷ್ಣರು ಮಾಡಿದ ಕೊನೆಯ ಸಾಧನೆಯೇ ಷೋಡಶೀ ಪೂಜೆ. ಸಾಕ್ಷಾತ್ ಶ್ರೀಮಾತೆಯನ್ನು ದೇವಿ ಪೀಠದಮೇಲಿಟ್ಟು ಸಾಂಗವಾಗಿ ಪೂಜಾದಿಗಳನ್ನು ಮಾಡಿ ಇದುವರೆಗೆ ಆಧ್ಯಾತ್ಮಿಕ ಜೀವನದಲ್ಲಿ ಯಾವ ಸಾಕ್ಷಾತ್ಕಾರಗಳನ್ನು ಸಂಪಾದಿಸಿದ್ದರೋ ಅದನ್ನೆಲ್ಲ ಶ್ರೀಶಾರದಾದೇವಿಯವರಿಗೆ ಪುಷ್ಪಾಂಜಲಿಯಂತೆ ಕೊಟ್ಟರು. ಕೊಟ್ಟು ಶ್ರೀರಾಮಕೃಷ್ಣರು ಖಾಲಿಯಾಗಲಿಲ್ಲ. ತಮ್ಮಲ್ಲಿ ಏನಿತ್ತೋ ಅದನ್ನು ಶಾರದಾದೇವಿಗೆ ಕೊಟ್ಟು ನಂತರ ತಮ್ಮಲ್ಲಿ ಯಾವಶಕ್ತಿಯಿತ್ತೋ ಅದಕ್ಕೆ ಶಾರದಾದೇವಿಯನ್ನೂ ಪಾಲದಾರರನ್ನಾಗಿ ಮಾಡಿದರು, ಇನ್ನುಮೇಲೆ ಅವರು ನಾಣ್ಯದ ಎರಡು ಭಾಗದಂತೆ ಆದರು. ಒಂದು ಕಡೆಯಿಂದ ನೋಡಿದರೆ ಶ್ರೀರಾಮಕೃಷ್ಣ ಮತ್ತೊಂದು ಕಡೆಯಿಂದ ನೋಡಿದರೆ ಶ್ರೀಶಾರದಾದೇವಿ. ಎರಡು ಶಕ್ತಿಗಳೂ ಅಭೇದ್ಯ.

ಶ್ರೀಮಾತೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಅಲ್ಲಿ ಯಾವ ಛಾಪ್ಲು, ಬೆಪ್ಪವನ್ನೂ ಇಲ್ಲ. ಯಾರು ಅವರ ಹತ್ತಿರ ಬರುತ್ತಾರೋ ಅವರಿಗೆ ಅವರಲ್ಲಿರುವ ಶಾಂತಿ, ಕಾವುತಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿವೇಕಾನಂದರನ್ನು ಜಗದ್ವಂದ್ಯ ಎಂದು ಹೊಗಳುತ್ತಿರುವಾಗ ಅವರು ಹೇಳುತ್ತಾರೆ "ನನ್ನಲ್ಲಿ ಏನು ಇದೆ, ಇದೆಲ್ಲಾ ಮಹಾ ಮಾತೆಯ ಮಹಿಮೆ". ಪ್ರಪಂಚ ವಿವೇಕಾನಂದರನ್ನು ಅರಿಯುವುದು ಸುಲಭ. ಆದರೆ ಯಾರು ವಿವೇಕಾನಂದರನ್ನು ಮಾಡಿದರಲ್ಲಾ ಅದು ಎಲ್ಲರಿಗೂ ಅರ್ಥವಾಗಲಾರದು. ಅಮೇರಿಕಾಕ್ಕೆ ಹೋಗುವುದಕ್ಕೆ ಮುಂಚೆ ವಿವೇಕಾನಂದರು ಶ್ರೀಮಾತೆಗೆ ಕಾಗದ ಬರೆಯುತ್ತಾರೆ. "ಜನ ನನ್ನನ್ನು ಅಮೇರಿಕಾ ದೇಶಕ್ಕೆ ಹೋಗಿ ಎಂದು ಹೇಳುತ್ತಿರುವರು ಆದರೆ ನೀವು ಅದನ್ನು ನಿರ್ಣಯಿಸಬೇಕು. ನಾನು ಹೋಗುವುದು ಸೂಕ್ತವಾಗಿದ್ದರೆ ಒಂದು ಆಶೀರ್ವಾದ ಪತ್ರವನ್ನು ಬರೆಯಿರಿ" ಎಂದು. ಶ್ರೀಮಾತೆಯವರು ನೀನು ಜನರ ಒಳ್ಳೆಯದಕ್ಕೆ ಹೋಗುವುದು. ನಾನೊಂದು ದೃಶ್ಯವನ್ನು ಕಂಡೆ ಅದರಲ್ಲಿ ಶ್ರೀರಾಮಕೃಷ್ಣರು ಸಾಗರದ ಮೇಲೆ ಅಮೇರಿಕಾ ದೇಶಕ್ಕೆ ಹೋಗುತ್ತಿರುವುದು, ನೀನು ಅವರ ಸಂದೇಶವನ್ನು ತೀರ್ಥದಂತೆ ಜನರಿಗೆಲ್ಲಾ ಅಭಿಷೇಕ ಮಾಡುವುದನ್ನು ಕಂಡೆ "ಎಂದು ಉತ್ತರಿಸಿದರು. ಅಮೇರಿಕಾ ದೇಶಕ್ಕೆ ಹೋಗಲೇ ಬೇಡವೇ ಎಂದು ತೂಗುಯ್ಯಾಲೆ ಆಡುತಿದ್ದ ವಿವೇಕಾನಂದರು ಶ್ರೀಮಾತೆಯವರ ಆಶೀರ್ವಾದ ಕವಚವನ್ನು ತೊಟ್ಟು ಅಮೇರಿಕಾ ದೇಶಕ್ಕೆ ಹೋಗುತ್ತಾರೆ. ಶ್ರೀಮಾತೆಯವರ ಕೃಪಾಶೀರ್ವಾದ ವಿವೇಕಾನಂದರ ವ್ಯಕ್ತಿತ್ವದ ಹಿಂದೆ ಕೆಲಸಮಾಡುತ್ತಿರುವುದನ್ನು ತಿಳಿದುಕೊಳ್ಳಬಲ್ಲವರು ಅತಿ ವಿರಳ. ಜೀವನದಲ್ಲಿ ಯಾವ ಆಧ್ಯಾತ್ಮಿಕ ಸತ್ಯಗಳನ್ನಾಗಲೀ ತಿಳಿದಿರುವವರು ಅಲ್ಪ. ಇತರರು ಅಂತಹ ವ್ಯಕ್ತಿಯ ಮೂಲಕವಾಗಿ ಅರ್ಥಮಾಡಿಕೊಳ್ಳಬೇಕಾಗಿರುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri
ಹೂವಿನಂತೆ ಬೆಳಗುತ್ತಿವೆ. ಅವರ ಗುಣಗಣನೆ ಮಾಡಹೋದರೆ ಅದೇ ಒಂದು ಸಹಸ್ರನಾಮಾರ್ಚನೆಯಾಗುವುದು. ನಾನು ಅದಕ್ಕೆ ಕೈಹಾಕುವುದಿಲ್ಲ. ಅದರಲ್ಲಿ ನಮ್ಮನ್ನೆಲ್ಲ ಸೂರೆಗೊಳ್ಳುವ ಕೆಲವನ್ನು ಮಾತ್ರ ಹೇಳುತ್ತೇನೆ. ಅದರ ಸುತ್ತುಮುತ್ತ ಎಷ್ಟೆಷ್ಟೋ ನಮ್ಮನ್ನು ಆಕರ್ಷಿಸುವ ಸುಗುಣಗಳಿವೆ. ಅವುಗಳಲ್ಲಿ ಯಾವುದನ್ನು ತೆಗೆದುಕೊಳ್ಳುವುದು ಯಾವುದನ್ನು ಬಿಡುವುದು ಅದೇ ಒಂದು ಸಮಸ್ಯೆಯಾಗುವುದು.

ಮೊದಲು ನಮ್ಮನ್ನು ಆಕರ್ಷಿಸುವುದು ಅವರ ಅನುಕಂಪ. ಯಾರು ಅವರ ಬಳಿಗೆ ಬಂದು ತಾಯಿ ಎಂದು ಒಂದು ಬಾರಿ ಹೇಳಿದರೆ ಸಾಕು. ಮಾತೃಪ್ರೇಮದ ಬುಗ್ಗೆ ಜಿನುಗುವುದು. ಶ್ರೀಮಾತೆ ಯಾವಾಗಲೂ ತಾವೇ ಅಡಿಗೆಮಾಡಿ ಶ್ರೀರಾಮಕೃಷ್ಣರಿಗೆ ಬಡಿಸುತ್ತಿದ್ದರು. ಇನ್ನೇನೂ ಎಲ್ಲ ಅಡಿಗೆ ಆಗಿದೆ ಶ್ರೀರಾಮಕೃಷ್ಣರಿಗೆ ತೆಗೆದುಕೊಂಡು ಹೋಗಬೇಕು, ಅಷ್ಟುಹೊತ್ತಿಗೆ ಸರಿಯಾಗಿ ಒಬ್ಬ ಭಕ್ತ ಮಹಿಳೆ ಬಂದು "ತಾಯಿ ನಾನು ಈವತ್ತು ಶ್ರೀರಾಮಕೃಷ್ಣರಿಗೆ ಬಡಿಸಿ ಧನ್ಯಳಾಗುತ್ತೇನೆ" ಎಂದು ಹೇಳುತ್ತಾಳೆ. ಶ್ರೀಮಾತೆಯವರು "ಆಗಲಿ ನೀನೇ ತೆಗೆದುಕೊಂಡು ಹೋಗಿ ಬಡಿಸಿ ಬಾ" ಎಂದು ಹೇಳುತ್ತಾರೆ. ಶ್ರೀರಾಮಕೃಷ್ಣರು ಆ ಸ್ತ್ರೀ ತಂದ ಆಹಾರವನ್ನು ತೆಗೆದುಕೊಳ್ಳಲು ಆಗಲಿಲ್ಲ ಶ್ರೀಮಾತೆಯರನ್ನು ಬರಹೇಳಿ "ನೋಡಿ ಈಕೆ ತಂದುದನ್ನು ನಾನು ತಿನ್ನಲಿಕ್ಕೆ ಆಗುವುದಿಲ್ಲ. ಅವಳ ಜೀವನದಲ್ಲಿ ಯಾವ ಕಳಂಕವಿದೆಯೋ ನನಗೆ ಗೊತ್ತಿಲ್ಲ. ನೀವು ಹೋಗಿ ಇನ್ನೊಂದು ಸಾರಿ ಅದನ್ನು ತೆಗೆದುಕೊಂಡು ಬನ್ನಿ ಮತ್ತು ನನಗೆ ಇನ್ನೊಂದು ಮಾತನ್ನು ಹೇಳಬೇಕು. ನಾವು ಯಾರೊಂದಿಗೂ ನನ್ನ ಊಟ ಕಳುಹಿಸುವುದಿಲ್ಲ ಎಂದು." ಆಗ ಶ್ರೀಮಾತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯವರು " ನಾನು ನಿಮಗೆ ಮತ್ತೊಮ್ಮೆ ಊಟ ತೆಗೆದುಕೊಂಡು ಬರುವೆ ಆದರೆ ಯಾರಾದರೂ ಭಕ್ತ ಮಹಿಳೆಯರು ಬಂದು ತಾಯೀ ನಾನು ಶ್ರೀರಾಮಕೃಷ್ಣರಿಗೆ ಊಟ ತೆಗೆದುಕೊಂಡು ಹೋಗುತ್ತೇನೆ ಎಂದರೆ ಇಲ್ಲ ಎನ್ನಲು ನನಗೆ ಮನಸ್ಸು ಬರುವುದಿಲ್ಲ, ನಿಮ್ಮನ್ನು ಸೇವಿಸಿ ಎಲ್ಲರೂ ಧನ್ಯರಾಗಲಿ ಎಂದು ನಾನು ಆಶಿಸುತ್ತೇನೆ " ಎಂದರು. ಶ್ರೀರಾಮಕೃಷ್ಣರು ಈ ಮಾತನ್ನು ಕೇಳಿದಾಗ ಕೋಪಗೊಳ್ಳಲಿಲ್ಲ. ಶ್ರೀಮಾತೆಯಲ್ಲಿ ಮತ್ತೊಬ್ಬರಿಗೆ ಕನಿಕರ ಪಡುವ ಗುಣವನ್ನು ನೋಡಿ ಸಂತೋಷ ಪಡುತ್ತಾರೆ.

ಯಾರು ಏನು ಮಾಡಿದರೂ ಮತ್ತೊಬ್ಬರಲ್ಲಿ ತಪ್ಪು ಕಂಡು ಹಿಡಿಯಬೇಡ ಎಂದು ಶ್ರೀಮಾತೆ ಹೇಳುತ್ತಿದ್ದರು. ಶ್ರೀರಾಮಕೃಷ್ಣರ ನಿರ್ಯಾಣಾನಂತರ ಬೃಂದಾವನಕ್ಕೆ ಶ್ರೀಕೃಷ್ಣನನ್ನು ನೋಡಲು ಬಂದಾಗ ಅವರು ಭಗವಂತನನ್ನು ಪ್ರಾರ್ಥಿಸುತ್ತಾರೆ. ಇನ್ನೊಬ್ಬರಲ್ಲಿ ತಪ್ಪನ್ನು ಕಂಡುಹಿಡಿಯುವ ಚಾಳಿಯನ್ನು ನನ್ನಿಂದ ಸಂಪೂರ್ಣ ನಾಶಮಾಡೆಂದು. ಅವರ ಜೀವನ ನೋಡಿದರೆ ಶ್ರೀಕೃಷ್ಣ ಪರಮಾತ್ಮ ಅವರ ಪ್ರಾರ್ಥನೆಯನ್ನು ಕರುಣಿಸಿದ್ದ ಎನ್ನುವುದು ನಮಗೆ ತೋರುವುದು. ಶ್ರೀಮಾತೆಯವರ ಸುತ್ತ ಜಗಳಗಂಟರು ತಪ್ಪುಮಾಡುವವರು ಇವರಿಗೆ ಬರಗಾಲವಿರಲಿಲ್ಲ. ಇವುಗಳ ಮಧ್ಯದಲ್ಲಿದ್ದರೂ ಯಾರಲ್ಲೂ ತಪ್ಪನ್ನು ಕಂಡು ಹಿಡಿಯುತ್ತಿರಲಿಲ್ಲ. ಇದೊಂದು ಮಹಾ ಗುಣ. ಶ್ರೀಮಾತೆಯವರು ಪ್ರಪಂಚವನ್ನು ಬಿಡುವ ಸಮಯದಲ್ಲಿಯೂ ನೋಡುತ್ತೇವೆ. ಒಬ್ಬ ಭಕ್ತಳು ಕೃಶವಾಗಿರುವ ಶ್ರೀಮಾತೆಯರನ್ನು ನೋಡಿ ಕಂಬನಿದುಂಬಿ ತಾಯಿ ನೀವು ಇರುವ ತನಕ ನಮ್ಮ ಸಂಕಟವನ್ನು ನಿವಾರಿಸಿ ಎಲ್ಲರ ಮೇಲೆ ಹೆಚ್ಚಿನ ಸಾವಧಾನ ಪಡೆಯುತ್ತಿದ್ದೆವು. ನೀವು ಹೋದ ಮೇಲೆ ನಾವು ಯಾರ

Sri Vidyabharathi Book Centre, Sringeri

CC-O. In Public Domain. Digitized by eGangotri
ಹತ್ತಿರ ಹೋಗಬೇಕು? ಎನ್ನುತ್ತಾಳೆ. ಶ್ರೀಮಾತೆಯ ಮಹಿಳೆಗೆ ನಿನಗೆ ಶಾಂತಿ ಬೇಕಾದರೆ ಮತ್ತೊಬ್ಬರಲ್ಲಿ ತಪ್ಪನ್ನು ಕಂಡುಹಿಡಿಯಬೇಡ. ಎಲ್ಲರನ್ನೂ ನಿನ್ನವರನ್ನಾಗಿ ನೋಡು ಎನ್ನುತ್ತಾರೆ. ಇದು ಆಕೆಗೆ ಮಾತ್ರ ಮಾಡಿದ ಬೋಧನೆಯಲ್ಲ ನಮಗೆಲ್ಲಾ ಆಕೆಯ ಮೂಲಕ ಮಾಡಿದ ಬೋಧನೆ.

ಶ್ರೀಮಾತೆಯವರ ಪ್ರೇಮ ಉಚ್ಚ ವರ್ಗಗಳ ಜನಗಳ ಮೇಲೆ ಮಾತ್ರ ಇರಲಿಲ್ಲ. ಸಮಾಜದಲ್ಲಿ ಯಾರು ಕೆಳಗಿರುವರೋ ಅನುಮಾನಾಸ್ಪದವಾದ ಶೀಲವುಳ್ಳವರೋ ಅವರ ಮೇಲೆಯೂ ಹರಿಯುತ್ತಿತ್ತು. ಅವರು ಹಲವು ಮಕ್ಕಳ ತಾಯಿ. ಒಂದು ಕಡೆ ನರೇಂದ್ರ, ಶಾರದಾನಂದ, ಬ್ರಹ್ಮಾನಂದದಂತಹವರು ಇದ್ದರೆ ಇನ್ನೊಂದು ಕಡೆ ಕಳ್ಳರಿದ್ದರು. ಹೀನ ಕುಲದಲ್ಲಿ ಹುಟ್ಟಿದವರಿದ್ದರು. ವರೋಡೆಕಾರರಿದ್ದರು. ಸೂರ್ಯನ ಬೆಳಕು ಹೇಗೆ ಪುಣ್ಯವಂತರ ಮಹಡಿಯ ಮೇಲೆ ಬೀಳುತ್ತದೆಯೋ ದೀನರ ಬಡಗುಡಿಸಿಲಿನ ಮೇಲೆ ಪಕ್ಷಪಾತವಿಲ್ಲದೆ ಬೀಳುತ್ತದೆ.

ಅಮ್‌ಜಾನ್ ಎಂಬ ಮಹಮದೀಯ ವಾತಾವರಣಕ್ಕೆ ವಶನಾಗಿದರೋಡೆ ಮಾಡಬೇಕಾಗಿತ್ತು. ಆದರೆ ಅವನಲ್ಲಿ ಒಂದು ಒಳ್ಳೆಯ ಗುಣವಿತ್ತು. ಶ್ರೀಮಾತೆಯವರ ಮೇಲೆ ಅಪಾರ ಪ್ರೀತಿ. ಸಾಧ್ಯವಿದ್ದರೆ ಪ್ರತಿನಿತ್ಯವೂ ಶ್ರೀಮಾತೆಗೆ ನಮಿಸದೆ ಹೋಗುತ್ತಿರಲಿಲ್ಲ. ಅವನು ಒಮ್ಮೆ ಬರುವಾಗ ಒಂದು ಬಾಳೆಹಣ್ಣಿನ ಗೊನೆ ತಂದು ಶ್ರೀಮಾತೆಗೆ ಅರ್ಪಿಸಿದ. ಶ್ರೀಮಾತೆಯವರು ಅದನ್ನು ಮಾರನೆಯದಿನ ದೇವರಿಗೆ ಅರ್ಪಿಸು ಎಂದರು. ಅದನ್ನು ನೋಡಿ ಕೊಳ್ಳುತ್ತಿದ್ದ ಹೆಂಗಸು ಇವನು ಯಾರ ತೋಟದಿಂದ ಇದನ್ನು ಕದ್ದು ತಂದಿರುವನೋ? ಇದನ್ನು ನೀನೆ ನೈವೇದ್ಯ ಮಾಡಲಿ ಎಂದು ಕೇಳಿದಳು, ಅದಕ್ಕೆ ಶ್ರೀಮಾತೆ ಅವನ ಶೀಲ ನನಗೆ

Sri Vidyabharathi Book Centre, Sringeri

CC-O. In Public Domain. Digitized by eGangotri
ಗೊತ್ತಾಗುವದು ಒಂದು ಗಾಜಿನ ಅಲ್ಮೇರಾದಲ್ಲಿ ಇರುವ ವಸ್ತು ಹೇಗೆ ಗೊತ್ತಾಗುವದೋ ಹಾಗೆ, ಆದರೂ ಅದನ್ನು ದೇವರಿಗೆ ಅರ್ಪಿಸು ಎಂದೆ ಎಂದರು. ದೇವರು ಪುಣ್ಯಾತ್ಮರಿಗೆ ಮಾತ್ರ ವಿಾಸಲೇ? ಪಾಪಿಗಳು ಅವರ ಬಳಿಗೆ ಬರಕೂಡದೇ? ಹಾಗಾದರೆ ಪಾಪಾತ್ಮನು ಪುಣ್ಯಾತ್ಮನಾಗಿ ಹೇಗೆ ಆಗುವನು? ಎಂದು ಕೇಳಿದರು.

ಅಮ್‌ಜಾನ್ ಒಂದು ಕಳ್ಳತನದಲ್ಲಿ ಸಿಕ್ಕಿಬಿದ್ದು ಸುಮಾರು ಒಂದೆರಡು ವರ್ಷ ಜೈಲಿನಲ್ಲಿ ನರಳಬೇಕಾಯಿತು. ಜೈಲಿನಿಂದ ಬಂದವನೇ ಅಮ್‌ಜಾನ್ ಶ್ರೀಮಾತೆಯವರ ಬಳಿ ಬಂದು ನಮಸ್ಕಾರ ಮಾಡಿದ, ಶ್ರೀಮಾತೆ ಏನು ನೀನು ಕೆಲವು ಕಾಲದಿಂದ ಬರುತ್ತಿರಲಿಲ್ಲವಲ್ಲ ಏಕೆ? ಎಂದು ಕೇಳಿದರು. ಅಮ್‌ಜಾನ್ ಇದ್ದದ್ದನ್ನು ಇದ್ದಂತೆ ಹೇಳಿದ. ಒಂದು ಕಳ್ಳತನದಲ್ಲಿ ಸಿಕ್ಕಿಬಿದ್ದು ಜೈಲಿಗೆ ಹೋಗಬೇಕಾಯಿತು. ಇವತ್ತು ಬೆಳಿಗ್ಗೆ ಅಲ್ಲಿಂದ ಬಂದೆ, ನಿಮ್ಮ ದರ್ಶನ ಪಡೆದು ತುಂಬ ದಿನವಾಗಿತ್ತು, ಅದಕ್ಕಾಗಿ ಮುಂಜೆ ನಿಮ್ಮನ್ನು ನೋಡಲು ಬಂದೆ ಎಂದನು. ಶ್ರೀಮಾತೆ ಅಮ್‌ಜಾನ್‌ನನ್ನು ನೋಡಿದರು. ತಲೆ ತಿರಿಗಟ್ಟಿ ಹೋಗಿದೆ, ಸ್ನಾನವಿಲ್ಲ, ಬಡಕಲಾಗಿದ್ದ ಅವನನ್ನು ಕಂಡು, ಹೋಗು ಮೊದಲು ಕೆರೆಗೆ ಹೋಗಿ ಸ್ನಾನಮಾಡು— ಮಾಡುವಾಗ ಈ ಎಣ್ಣೆಯನ್ನು ತಲೆಗೆ ಸವರಿಕೋ. ಅನಂತರ ಬಂದು ಪ್ರಸಾದ ತೆಗೆದುಕೊಂಡು ಹೋಗು ಎಂದರು. ಆತ ಸ್ನಾನ ಮಾಡಿದ ಮೇಲೆ ಊಟಕ್ಕೆ ವೇಳೆಯಾಗಿತ್ತು. ಶ್ರೀಮಾತೆ ಹತ್ತಿರವಿದ್ದ ಹೆಂಗಸರೊಬ್ಬರಿಗೆ ಅವನಿಗೆ ಊಟಕ್ಕೆ ಬಡಿಸು ಎಂದರು. ಅವನಿಗೆ ಎಲೆ ಹಾಕಿದಮೇಲೆ ದೂರದಿಂದ ಅವನ ಎಲೆಗೆ ಹೆಂಗಸು ಬಡಿಸುತ್ತಿದ್ದಳು. ಶ್ರೀಮಾತೆ ಅವನನ್ನು ನೋಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹತ್ತಿರ ಹೋಗಿ ಪ್ರೀತಿಯಿಂದ ಅವನನ್ನು ಕೂಡಿ. ಹೀಗೆ ಎಸೆದರೆ ಅವನಿಗೆ ತಿನ್ನಲು ಹೇಗೆ ಮನಸ್ಸಾಗುವುದು ಎಂದರು. ಆ ಹೆಂಗಸು ಆಚಾರವಂತ ಬ್ರಾಹ್ಮಣರ ಮನೆತನದಿಂದ ಬಂದವರು. ನಾನು ಹತ್ತಿರ ಹೋಗಿ ಬಡಿಸಿದರೆ ಜಾತಿ ಎಲ್ಲಿ ಹೋಗಿಬಿಡುವುದೋ ಎಂದರು. ಶ್ರೀಮಾತೆ ಆ ಸ್ತ್ರೀಗೆ ನೀನು ಬಡಿಸಬೇಕಾಗಿಲ್ಲ. ನಾನು ಬಡಿಸುತ್ತೇನೆ ಎಂದು ಅವನ ಹತ್ತಿರ ಹೋಗಿ ವಿಶ್ವಾಸದಿಂದ ಮಾತನಾಡುತ್ತ ಹೊಟ್ಟೆ ತುಂಬ ಬಡಿಸಿದರು. ಅವ್‌ಜಾನ್ ಎಲೆಯನ್ನು ಎತ್ತಲು ಬಂದಾಗ ನೀನು ಅದನ್ನು ಮಾಡಬೇಡ. ನೀನು ನನ್ನ ಮಗ, ಮಗನ ಎಲೆಯನ್ನು ಎತ್ತುವುದು ತಾಯಿಯ ಹಕ್ಕು ಎಂದರು. ಅವನಿಗೆ ವೀಳಯವನ್ನು ಕೊಟ್ಟು ಕಳುಹಿಸಿದರು. ಶರತ್ (ಸ್ವಾಮಿ ಶಾರದಾನಂದ) ಹೇಗೆ ನನ್ನ ಮಗನೋ ದಿಕ್ಕೆಟ್ಟ ಅವ್‌ಜಾನ್ ಕೂಡ ನನ್ನ ಮಗ ಎಂದರು. ಈ ಕರುಣಾಮೂರ್ತಿಯನ್ನೂ ಕಂಡರೆ ನಮ್ಮ ಕಣ್ಣು ಗಳಲ್ಲಿ ನೀರು ಬರುವುದು, ಹೃದಯ ಕರಗುವುದು.

ಗುಲಾಬ್ ಎಂಬಾಕೆ ಶ್ರೀರಾಮಕೃಷ್ಣರ ಭಕ್ತಳು. ಶ್ರೀರಾಮಕೃಷ್ಣರ ಕಾಲಾನಂತರ ಶ್ರೀಮಾತೆಯ ಸೇವೆಯನ್ನು ಮಾಡುತ್ತಿದ್ದರು. ಶ್ರೀಮಾತೆಯ ಬಳಿಗೆ ಹಲವು ಜನ ಬರುತ್ತಿದ್ದರು. ಮಕ್ಕಳಿಲ್ಲದವರು, ಒಬ್ಬ ಯೋಗ್ಯ ಪತಿ ಸಿಕ್ಕಬೇಕೆನ್ನುವವರು, ಇನ್ನೂ ಹಲವು ಬಗೆಯ ಆಸೆ ಆಕಾಂಕ್ಷೆಗಳಿಂದ ಪ್ರೇರಿತರಾದವರೇ ಜಾಸ್ತಿ. ಶ್ರೀಮಾತೆ ಯಾರನ್ನೂ ನಿಕೃಷ್ಟವಾಗಿ ಕಂಡವರಲ್ಲ, ಎಲ್ಲರಿಗೂ ಭಗವಂತನ ದಯೆಯಿದ್ದರೆ ನೀನು ಆ ಕಷ್ಟದಿಂದ ಪಾರಾಗುವೆ ಎನ್ನುತ್ತಿದ್ದರು. ಒಂದು ಬಾರಿ ಗುಲಾಬ್ ಶ್ರೀಮಾತೆಗೆ ಹೇಳುತ್ತಾರೆ. ನಾನು ಶ್ರೀರಾಮಕೃಷ್ಣರ ಶಿಷ್ಯರನ್ನು ಕಂಡಿದ್ದೇನೆ. ಅವರಲ್ಲಿ ಪ್ರತಿಯೊಬ್ಬರೂ ಆಧ್ಯಾತ್ಮಿಕ ಮೇರು ಶಿಖರಗಳು. ನಿಮ್ಮ ಶಿಷ್ಯರಲ್ಲಿ ಎಷ್ಟು ಜನ ಇದ್ದಾರೆ

Sri Vidyabharathi Book Centre, Sringeri

CC-O. In Public Domain. Digitized by eGangotri
ಅಂತಹವರು? ಎಂದು ಕೇಳಿದೆಳು. ಆಗ ಶ್ರೀಮಾತೆಯು ಸಕ್ಕು
ಶ್ರೀರಾಮಕೃಷ್ಣರ ಶಿಷ್ಯರನ್ನೂ ನನ್ನ ಶಿಷ್ಯರನ್ನೂ ಒಂದೇ ತಕ್ಕಡಿ
ಯಲ್ಲಿಟ್ಟು ತೂಗಬೇಡ. ಶ್ರೀರಾಮಕೃಷ್ಣರು ಕನ್ಯಾ ಶಿಷ್ಯರನ್ನು
ಜೆನ್ನಾಗಿ ಆರಿಸಿ ಜಳ್ಳನೆಲ್ಲಾ ತ್ಯಜಿಸಿ ಗಟ್ಟಿಯನ್ನು ಮಾತ್ರ
ತೆಗೆದುಕೊಂಡರು. ಈ ಕಳಪೆ ಶಿಷ್ಯರನ್ನು ಮಾತ್ರ ನನ್ನ ಪಾಲಿಗೆ
ಬಿಟ್ಟುಹೋಗಿರುವರು. ನನ್ನ ಶಿಷ್ಯರು ಒಂದು ಸೇರು ಹಾಲಿಗೆ
ಮೂರು ಸೇರು ನೀರು ಸೇರಿಸಿದವರು. ಶಿಷ್ಯರು ಬಂದು ನೀರು
ಹಾಲನ್ನು ನನಗೆ ಕೊಟ್ಟು, ತಾಯಿ ನೀವು ಇದರಿಂದ ಬಾಸುಂದಿ
ಮಾಡಿ ಗುರುದೇವರಿಗೆ ನೈವೇದ್ಯಮಾಡಬೇಕು ಎನ್ನುತ್ತಾರೆ.
ಅದಕ್ಕೆ ಇರುವ ಕಟ್ಟಿಗೆ ಹಸಿ, ಸಾಲದ ಕಡಿಮೆಗೆ ಗಂಟಲು
ಮಯ. ನಾನು ಊದಿ ಊದಿ ಕಣ್ಣು ಗಳೆಲ್ಲ ಬಾತುಹೋಗಿವೆ
ಎನ್ನುತ್ತಾರೆ. ಆದರೆ ಅಂತಹ ಶಿಷ್ಯರನ್ನು ಆಲ್ಲಗಳೆದರೆ, ತಿರಸ್ಕರಿ
ಸಿದರೆ, ಇಲ್ಲ. ಅವರನ್ನು ಪ್ರೀತಿಸಿದರು. ನೋಡಲು ಜೆನ್ನಾ
ಗಿರುವ ಮಗನನ್ನು ಹೇಗೆ ಪ್ರೀತಿಸಿದರೋ, ಗೂನು ಬೆನ್ನಿನ
ವಿಕಾರವಾದ ಮಗುವನ್ನು ಕೂಡ ಅಷ್ಟೇ ಅಕ್ಕರೆಯಿಂದ ಪ್ರೀತಿಸಿ
ದರು ಸುಂದರವಾಗಿದೆಯೇ ವಿಕಾರವಾಗಿದೆಯೇ ಎನ್ನುವ
ದೃಷ್ಟಿಯಿಂದ ಅಲ್ಲ. ಇವರೆಲ್ಲ ನನ್ನ ಮಕ್ಕಳು, ನನ್ನಲ್ಲಿ ಆಶ್ರಯ
ಪಡೆಯಲು ಬಂದವರು, ನಾನು ಹೇಗೆ ಅವರನ್ನು ತಿರಸ್ಕರಿಸಲು
ಸಾಧ್ಯ? ಶಂಕರಾಚಾರ್ಯರು ಕೆಟ್ಟ ಮಕ್ಕಳು ಹುಟ್ಟುತ್ತಾರೆ,
ಎಂದಿಗೂ ಕೆಟ್ಟತಾಯಿ ಹುಟ್ಟುವುದಿಲ್ಲ ಎಂದು ಹೇಳಿದರು.
ಅದಕ್ಕೆ ನಿದರ್ಶನ ಶ್ರೀಮಾತೆಯ ಬದುಕು. ಇಂತಹ ಹಲವಾರು
ಘಟನೆಗಳು ನಿಮಗೆ ಪುಸ್ತಕದ ಉದ್ದಕ್ಕೆ ಸಿಗುತ್ತವೆ. ಮಾದರಿಗೆ
ಕೆಲವನ್ನು ಕೊಟ್ಟಿರುವೆವು. ಇದರಿಂದ ಆ ಮಹಾತಾಯಿಯ
ಹೃದಯವನ್ನು ಅರಿಯಲು ಪ್ರಯತ್ನಿಸಿರಿ.
Sri Vidyabhaskar Bhoodan Centre, Sringeri

CC-O. In Public Domain. Digitized by eGangotri

ಶ್ರೀಮಾತೆ ಶ್ರೀರಾಮಕೃಷ್ಣರಂತಹ ಶ್ರೇಷ್ಠರನ್ನು ಕೈಹಿಡಿದರು. ಅವರ ಸೇವೆ ಮಾಡಿದರು. ಆಧ್ಯಾತ್ಮಿಕತೆಯಲ್ಲಿ ಶ್ರೀರಾಮಕೃಷ್ಣರಿಗೆ ಸರಿಸಮನಾಗಿದ್ದರು. ಆದರೂ ಅವರಿಗೆ ಬಂದ ಕೆಲವು ಕಷ್ಟಗಳಲ್ಲಿ ಕಠೋರವಾದ ಕಷ್ಟಗಳನ್ನು ಕೇಳಿದರೆ ಕಣ್ಣು ಒದ್ದೆಯಾಗುವುದು. ದೇವರು ಏತಕ್ಕೆ ಇಂತಹ ಪುಣ್ಯವಂತರಿಗೆ ಇಂತಹ ಕಷ್ಟಗಳನ್ನು ಕೊಟ್ಟ ಎಂಬುದು ನಮ್ಮ ಬುದ್ಧಿಗೆ ಪರಿಹರಿಸಲಾಗದ ಸಮಸ್ಯೆ. ದೇವರು ಅನಾವಶ್ಯಕವಾಗಿ ಯಾವುದನ್ನೂ ಕೊಡುವುದಿಲ್ಲ. ಇದರಿಂದ ನಾವು ಪಾಠ ಕಲಿಯಲು ಅದನ್ನು ಅನುಭವಿಸಿದರು. ಅವರಿಗೆ ಮೊದಲು ಬಂದದ್ದು ಕಡು ಬಡತನ. ಶ್ರೀರಾಮಕೃಷ್ಣರ ಕಾಲಾನಂತರ ಕೆಲವು ಕಾಲ ಬೃಂದಾವನದಲ್ಲಿದ್ದು ಕಾಮಾರಪುಕುರಕ್ಕೆ ಬಂದರು. ಅವರ ಮನೆಯಲ್ಲಿರುವವರು ಜೀವನೋಪಾಯಕ್ಕೆ ಬೇರೆ ಕಡೆ ಹೋಗಿದ್ದರು. ಕಣಜದಲ್ಲಿ ಸ್ವಲ್ಪ ಹಿಂದಿನ ವರ್ಷದ ಬತ್ತ ಇತ್ತು. ಅವನ್ನು ಅಕ್ಕಿಮಾಡಿ ಅದರೊಂದಿಗೆ ಬೆರೆಸಲು ಉಪ್ಪಿನ ಹರಳೂ ಇಲ್ಲದುದನ್ನು ಕೇಳುವೆವು. ಸುಮಾರು ಐದು ಮೈಲಿ ದೂರದಲ್ಲಿ ಜಯರಾಮಬಾಟಿ ಶ್ರೀಮಾತೆಯ ತವರೂರು ಇತ್ತು, ತಾಯಿಯನ್ನು ಮನೆಗೆ ಬಂದು ಇರು ಎಂದರು ಅವರ ಮನೆಗೆ ಹೋದಾಗ ಅವರ ಬಡತನವನ್ನು ಯಾರೂ ವಿವರಿಸ ಬೇಕಾಗಿರಲಿಲ್ಲ. ಹರಿದ ಬಟ್ಟೆ, ಮಾಸಲು ಸೀರೆ ಸಾಕು. ಆದರೂ ಅವರು ವಿಧಿಯನ್ನು ಬೈದವರಲ್ಲ. ಶ್ರೀರಾಮಕೃಷ್ಣರೇ ನನ್ನನ್ನು ಈ ಗಾಣಕ್ಕೆ ಹಾಕುತ್ತಿರುವರು. ನನಗೆ ಗೊತ್ತಿಲ್ಲ ಅದು ಏಕೋ, ಆದರೆ ದೇವರಿಗೆ ಗೊತ್ತಿದೆ ಎಂದು ಅದನ್ನು ಸಹಿಸಿದರು. ತಾಯಿ, ಶ್ರೀಮಾತೆಯನ್ನು ಕೇಳಿಕೊಂಡರು. ನೀನು ನನಗೆ ಭಾರವಲ್ಲ, ನೀನು ನನ್ನ ಮನೆಯಲ್ಲಿರು. ನಾನು

Sri Vidyabharathi Book Centre, Bringen

CC-O. In Public Domain. Digitized by eGangotri

ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದರು. ಆದರೆ ಶ್ರೀರಾಮಕೃಷ್ಣರ ತಮ್ಮ ಬಡ ಕುಟುಂಬಕ್ಕೆ ಹೋದರು. ಸ್ವಲ್ಪಕಾಲವಾದ ಮೇಲೆ ಕಲ್ಕತ್ತೆಯ ಭಕ್ತರಿಗೆ ಶ್ರೀಮಾತೆಯ ಕಷ್ಟ ಬೇರೊಬ್ಬರ ಮೂಲಕ ಗೊತ್ತಾಗಿ ಅವರನ್ನು ಬಡತನದಿಂದ ಪಾರುಮಾಡುತ್ತಾರೆ. ಬಡತನವನ್ನು ಹೇಗೆ ಸಹಿಸಬೇಕು, ಆದರಿಂದ ತಮ್ಮ ಜೀವನ ಇನ್ನೂ ಆಳಕ್ಕೆ ಹೋಗುವುದು ಅಂತಹ ಸ್ಥಿತಿಯಲ್ಲಿರುವವರಿಗೆಲ್ಲಿ ಮರುಗುವಂತೆ ಮಾಡುವುದು.

ಆವರಿಗೆ ಬಂದ ಎರಡನೆಯ ಅಭಿಶಾಪವೇ ವೈಧವ್ಯ. ಹಿಂದೂ ಧರ್ಮದಲ್ಲಿ ಯಾವಾಗ ಸ್ತ್ರೀ ವಿಧವೆಯಾಗುತ್ತಾರೋ, ಅವಳ ಸ್ಥಿತಿ ಶೋಕದ ಕಡಲಿಗೆ ಇಳಿಯುತ್ತದೆ. ಶ್ರೀರಾಮಕೃಷ್ಣರು ಸತಿಯನ್ನು ಮುತ್ತೈದೆಯ ಸಿಂಹಾಸನದ ಮೇಲೆ ಕೂಡಿಸಲಿಲ್ಲ. ವೈಧವ್ಯದ ಶಿಲುಬೆಗೆ ಹಾಕುತ್ತಾರೆ. ಅವರ ಪಾಲಿಗೆ ತಮ್ಮ ಪತಿ ಕಾಲವಾಗಿರಲಿಲ್ಲ. ಶ್ರೀಮಾತೆಯನ್ನು ಅಮಂಗಳದ ಚಿಹ್ನೆ ಕಾಡಲಿಲ್ಲ. ಆ ಸಮಯದಲ್ಲಿ ಪುಣ್ಯಕ್ಕೆ ಪುಣ್ಯವಾಗಿ ಬೆರಸಿದರು, ಬಂದ ಸಹಸ್ರಾರು ಜೀವಿಗಳಿಗೆಲ್ಲ ಬೆಳಕನ್ನು ಕೊಟ್ಟರು. ಅವರ ಸಹಾನುಭೂತಿಯಿಂದ ಎಷ್ಟೊಂದು ಜೀತನಗಳು ಹೊಸ ಬಾಳನ್ನು ಕಂಡರೋ ಅಸದಳ.

ಅವುಗಳಲ್ಲಿ ಮೂರನೇ ಕಂಟಕವೇ ಟೀಕೆ. ಅದನ್ನು ಸಹಿಸಬೇಕಾದರೆ ಒಬ್ಬ ದೇವಮಾನವನ ಶ್ರೇಣಿಗೆ ಸೇರಿಸಬೇಕು, ಇಲ್ಲದೆ ಇದ್ದರೆ ಅದರ ಭಾರಕ್ಕೆ ಸಿಕ್ಕಿ ನುಚ್ಚುನೂರಾಗಿ ಹೋಗುತ್ತಾರೆ. ಸಾಧಾರಣ ಜೀವಿಗಳು.

ಶ್ರೀರಾಮಕೃಷ್ಣರ ನಿರ್ಯಾಣಾನಂತರ ಶ್ರೀಮಾತೆ ತಮಗೆ ಕೊಟ್ಟದ್ದನ್ನು ಕಳಚಿಬಿಡುವುದರಲ್ಲಿದ್ದರು. ಆದರೆ ಶ್ರೀರಾಮಕೃಷ್ಣರೇ, ಅವರಿಗೆ ಕಾಣಿಸಿಕೊಂಡು ನಾನೇನು

Sri Vidyabharathi Book Centre, Sringeri

CC-0. In Public Domain. Digitized by eGangotri

ಕಾಲವಾದ ವಂದು ಭಾವಿಸಿದಿಯಾ? ದೇಹದಲ್ಲಿ ಇರುವಾಗ ನಾನು ಒಂದು ಸಣ್ಣ ಕೋಣೆಯಲ್ಲಿದ್ದೆ. ಈಗ ವಿಶ್ವವನ್ನೆಲ್ಲ ವ್ಯಾಪಿಸಿರುವೆನು. ನೀನು ಇತರರಂತೆ ವಿಧವಿಯಾಗಬೇಕಾಗಿಲ್ಲ. ಅಂಚಿನ ಸೀರೆಯನ್ನುಡು. ಕೊಟ್ಟ ಚಿನ್ನದ ಬಳೆ ಧರಿಸು ಎಂದು ಹೇಳಿದ್ದರು. ಕಾಮಾರಪುಕುರದಲ್ಲಿ ಇದ್ದ ಆಚಾರಶೀಲರು ಇದನ್ನು ಜರಿದರು. ವಿಧವೆಯಾದರೂ ಅಂಚಿನ ಸೀರೆ ಬಿಡಲಿಲ್ಲ. ಕೈಗೆ ಚಿನ್ನದ ಬಳೆ ಬೇರೆ ಧರಿಸಿದ್ದಾರೆ ಎಂದು ಟೀಕಿಸುತ್ತಿದ್ದರು. ಒಂದು ದಿನ ಇವರ ಟೀಕೆ ಮಿತಿಮೀರಿದಾಗ ಬಳೆಯನ್ನು ಕಳಚಿಬಿಟ್ಟರು. ತಕ್ಷಣವೇ ಶ್ರೀರಾಮಕೃಷ್ಣರು ಅವರಿಗೆ ಗೋಚರಿಸಿ, ನೀನು ಏತಕ್ಕೆ ಅದನ್ನು ತೆಗೆದುಬಿಟ್ಟೆ. ಇವತ್ತು ಗೌರಿದಾಸಿ ಬಂದು ನಿನಗೆ ಹೇಳುತ್ತಾಳೆ ಎಂದಂತೆ ಆಯಿತು. ಗೌರಿದಾಸಿ ಶ್ರೀರಾಮಕೃಷ್ಣರ ಶಿಷ್ಯಳು. ಅವಳು ಬಂದು ಪತಿಸತಿಗೆ ಚಿನ್ಮಯಮೂರ್ತಿ ನೀನು ಸಾಧಾರಣ ವಿಧವೆಯಂತೆ ಆಗಬೇಕಾಗಿಲ್ಲ ಎಂದು ಧೈರ್ಯ ಹೇಳಿದಳು. ಅಂದಿನಿಂದ ಅದನ್ನು ಧರಿಸಿದರು. ಯಾರು ಅವರನ್ನು ಜರಿಯುತ್ತಿದ್ದರೋ ಅವರಿಗೆ ಸಹಾ ಬುದ್ಧಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತಿದ್ದರು. ಸಮಾಜವಲ್ಲಿ ಟೀಕೆ ಎನ್ನುವುದು ವಿಷ ಬಾಣದಂತೆ. ಅದನ್ನು ಸಹಿಸಬೇಕಾದರೆ ಅದ್ಭುತ ತಪಸ್ಶಕ್ತಿ ಇರಬೇಕು. ಶ್ರೀಮಾತೆಯರು ಶ್ರೀರಾಮಕೃಷ್ಣರಿಗೆ ಯೋಗ್ಯ ತಪಸ್ವಿನಿಯಾದ ಸತಿಯಾಗಿದ್ದರು.

ಶ್ರೀಮಾತೆಯವರು ಆಧ್ಯಾತ್ಮಿಕ ಜೀವನದ ಮೇಲೆ ಹೇಳಿದ ಬೋಧನೆಗಳು ಎಲ್ಲರಿಗೂ ಅರ್ಥವಾಗುವಂತೆ ಸುಲಭವಾಗಿವೆ. ಅವರೇನು ವಿವೇಕಾನಂದರಂತೆ, ಬಿರುಗಾಳಿಯಂತೆ ಊರಿಂದೂರಿಗೆ ಹೋಗಲಿಲ್ಲ. ಶ್ರೀಮಾತೆ ಕೂತಕಡೆ ಇದ್ದರು. ಆದರೆ ಅವರಿಂದ ಬರುತ್ತಿದ್ದ ಕಾಂತಿ ಎಲ್ಲರ ಹೃದಯವನ್ನೂ ತಟ್ಟುತ್ತಿತ್ತು.

Sri Vidyabharathi Book Centre, Shringeri

CC-O. In Public Domain. Digitized by eGangotri

ಶ್ರೀಮಾತೆಯವರು ಆಧ್ಯಾತ್ಮಿಕ ಜೀವನದಲ್ಲಿ ಪ್ರತಿಕ್ಷಣವನ್ನು ಭಗವಂತನ ಹೆಸರನ್ನು ಜಪಕ್ಕೆ ಕೊಡುತ್ತಿದ್ದರು. ಸಾಧನೆಯಲ್ಲಿ ಆದರಷ್ಟು ಸುಲಭವಾಗಿರುವುದು ಇನ್ನೊಂದಿಲ್ಲ. ಆದಕ್ಕಾಗಿಯೇ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಯಜ್ಞಗಳಲ್ಲಿ ನಾನು ಜಪಯಜ್ಞ ಎಂದು ಹೇಳುತ್ತಾನೆ. ಆದನ್ನು ಮಾಡುವುದು ಸುಲಭ. ಯಾವ ಯಂತ್ರ ತಂತ್ರಗಳು ಬೇಕಾಗಿಲ್ಲ. ಭಗವಂತನ ಹೆಸರನ್ನು ಹೇಳುವುದು ; ಹಾಗೆ ಹೇಳುವಾಗ ಎಷ್ಟಾಗಿದೆ ಎಂಬುದಕ್ಕೆ ಕೈಬೆರಳನ್ನು ಉಪಯೋಗಿಸಿದರೆ ಸಾಕು. ಜಪಮಣಿಯಾದರೆ ಅದು ಮಧ್ಯೆ ಮಧ್ಯೆ ಕಿತ್ತು ಹೋಗುವುದು. ಅದು, ಯಾವಾಗ ಕಿತ್ತು ಹೋಗುವುದೋ ಆದು ನಮಗೆ ಗೊತ್ತಿಲ್ಲ. ಆದಕ್ಕಾಗಿ ಕೈಬೆರಳನಲ್ಲಿ ಭಗವಂತನ ಹೆಸರನ್ನು ಹೇಳು ಎನ್ನುತ್ತಿದ್ದರು. ದೇವರು ನಮಗೆ ಎರಡು ಕೈಗಳನ್ನು ಕೊಟ್ಟಿರುವುದು ಜಪಮಾಡುವುದಕ್ಕಾಗಿ. ಒಂದು ಕೈಯಿಂದ ಹತ್ತು ಮತ್ತೊಂದು ಕೈಯಿಂದ ಒಂದನ್ನು ಎಣಿಸಬಹುದು. ಎರಡು ಕೈಗಳಿಂದಲೂ ಎಷ್ಟು ಆದರೆ ನೂರೆಂಟು ಆಗುವುದು ಎಂಬುದು ಗೊತ್ತಾಗುವುದು. ಭಗವಂತನ ನಾಮದಲ್ಲಿ ಅದ್ಭುತವಾದ ಶಕ್ತಿ ಇದೆ. ಯಾವಾಗ ನಾವು ಶ್ರದ್ಧಾ ಭಕ್ತಿಯಿಂದ ಆದನ್ನು ಜಪಿಸುತ್ತೇವೆಯೋ ಆಗ ಆದು ನಮ್ಮ ಜೀವನದ ಮೇಲೆ ತನ್ನ ಪರಿಣಾಮವನ್ನು ಬಿಡುವುದು. ನಾವು ಉಚ್ಚರಿಸುವ ಬೀಜಮಂತ್ರಕ್ಕೆ ನಮಗೆ ಅರ್ಥ ಗೊತ್ತಿಲ್ಲದೆ ಇರಬಹುದು. ಆದರೆ ದೇವರಿಗೆ ಗೊತ್ತಿದೆ. ಅವನು ನನ್ನನ್ನೇ ಇವುಗಳ ಮೂಲಕಕರೆಯುತ್ತಿರುವನು ಎಂಬುದು. ನಮಗೆ ಯಾವುದೋ ಒಂದು ಖಾಯಿಲೆ ಬಂದಿದೆ. ವೈದ್ಯರಿಂದ ಔಷಧ ತೆಗೆದುಕೊಳ್ಳುವೆವು. ಔಷಧಿ ಯಾವ ರೀತಿ ನನ್ನ ರೋಗದ ಮೇಲೆ ಪರಿಣಾಮಕಾರಿಯಾಗುವುದು ಎಂಬುದು ನಮಗೆ

Sri Vidyaranya Sanskrit Book Centre, Sringeri

CC-O. In Public Domain. Digitized by eGangotri
ಗೊತ್ತಿಲ್ಲದೆ ಇರಬಹುದು, ಆದರೆ ಅದು ಪರಿಣಾಮಕಾರಿಯಾಗುವುದಿಲ್ಲವೇ? ಅದರಂತೆಯೇ ಭಗವಂತನ ನಾಮ. ಶ್ರೀರಾಮ ಕೃಷ್ಣರು ಹೇಳುತ್ತಿದ್ದರು ' ದೇವರಿಗಿಂತ ದೇವರ ಹೆಸರು ಪರಿಣಾಮಕಾರಿ. ಆದಕ್ಕೆ ಪುರಂದರದಾಸರು, "ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ" ಎಂದು ಹೇಳುತ್ತಿದ್ದರು. ಭಗವಂತನ ಹೆಸರನ್ನು ಹೇಳುವುದಕ್ಕೆ ಕಾಲ ಅಕಾಲವಿಲ್ಲ. ಕೂತಲ್ಲೋ ನಿಂತಲ್ಲೋ ಯಾವ ಸ್ಥಿತಿಯಲ್ಲಿದ್ದರೆ ಆ ಸ್ಥಿತಿಯಲ್ಲಿ ನಾವು ಅವನನ್ನು ಚಿಂತಿಸುತ್ತಿರಬಹುದು.

ಭಗವಂತನ ನಾಮ ನಮ್ಮ ಕಪಾಲಮೋಚನೆ ಮಾಡುತ್ತದೆ ಎಂದು ಶ್ರೀಮಾತೆ ಹೇಳುತ್ತಿದ್ದರು. ನಾವು ಬೋರ್ಡಿನ ಮೇಲೆ ಏನೇನೋ ಬರೆದಿರುವೆವು. ಆದರೆ ಮಾಸ್ಟರೆ ತನ್ನ ಕೈಯಲ್ಲಿರುವ ಬಟ್ಟೆಯಿಂದ ಅದನ್ನು ಒರೆಸುವಂತೆ ಭಗವಂತ ನಮ್ಮ ಮನಸ್ಸನ್ನು ಶುದ್ಧಮಾಡುತ್ತಾನೆ. ಈ ಕಪಾಲ ಮೋಚನೆ ಎಲ್ಲರಿಗೂ ಸಾಧ್ಯವಿಲ್ಲ. ಭಗವಂತನೊಬ್ಬನಿಗೇ ಮಾತ್ರ ಸಾಧ್ಯ. ಅದನ್ನು ನಂಬಿ ಸಾಧನೆ ಮಾಡಿದರೆ ಅವನು ನಮ್ಮನ್ನು ಬರಿಕೈಯಲ್ಲಿ ಕಳುಹಿಸುವುದಿಲ್ಲ.

ಶ್ರೀಮಾತೆಯವರು ಮತ್ತೊಂದು ಉದಾಹರಣೆಯನ್ನು ಕೊಡುತ್ತಿದ್ದರು. ಭಗವಂತನ ಹೆಸರು ಸೂರ್ಯನ ಕಿರಣದಂತೆ. ಅದು ಎಲ್ಲರ ಮೇಲೂ ಬೀಳುವುದು. ಸೂರ್ಯನ ಕಿರಣ ಪ್ರತಿದಿನವೂ ನಮ್ಮ ಎದುರಿಗೆ ಒಂದು ಪವಾಡವನ್ನು ಮಾಡುತ್ತಿದೆ. ನೀರು ಮೇಲಿನಿಂದ ಕೆಳಗಡೆ ಬರುವುದನ್ನು ನೋಡುತ್ತೇವೆ. ಆದರೆ ಅವನ ಕಿರಣ ಭೂಮಿಯನ್ನು ಮೇಲೆ ಹೋಗುವಾಗ ಅದರಲ್ಲಿರುವ ಕೊಳೆ ಕಶ್ಮಲವೆಲ್ಲ ಕೆಳಗೆ ನಿಂತು ಆವಿಯಾಗಿ ಮೇಲೆ ಹೋಗು
Sri Vidyabharathi Book Centre, Sringeri

CC-0. In Public Domain. Digitized by eGangotri
ವುದು ಹಾಗೆ ಹೋಗುವಾಗ ಪರಿಶುದ್ಧವಾಗಿ ಹೋಗುವುದು. ನೀರಿನ ಸ್ವಭಾವ ಮೇಲಿನಿಂದ ಕೆಳಗೆ ಬರುವುದು. ಆದರೆ ಯಾವಾಗ ಸೂರ್ಯಕಿರಣದ ಸಹಾಯದಿಂದ ಆವಿಯಾಗುವುದೋ ಆಗ ಕೆಳಗಡೆಯಿಂದ ಮೇಲುಗಡೆಗೆ ಹೋಗುವಾಗ ಭಯಾನಕವಾದ ಜೀವಾಣುಗಳನ್ನು ಕೆಳಗೆ ಬಿಟ್ಟು ಪರಿಶುದ್ಧವಾಗಿ ಹೋಗುವುದು. ಹಾಗೆಯೇ ಭಗವಂತನ ನಾಮ ನಮ್ಮ ಜೀವನದ ಮೇಲೆ ಒಂದು ಪವಾಡವನ್ನು ಮಾಡುತ್ತಿರುವುದು.

ಶ್ರೀಮಾತೆಯ ಬದುಕು ಕೆಸರಿನಲ್ಲಿ ಅರಳಿದ ಕಮಲದಂತೆ. ಕೆಳಗೆ ನೋಡಿದರೆ ಕೆಸರು, ಕೊಳೆ, ಕಶ್ಮಲಗಳು ಎಲ್ಲ ಇವೆ. ಆದರೆ ಕಮಲ ಕೆಳಗೆ ನೋಡುವುದಿಲ್ಲ. ಮೇಲೆ ನೋಡುವುದು. ಯಾವಾಗಲೂ ಸೂರ್ಯನ ದಿಕ್ಕಿಗೆ ತಿರುಗಿರುವುದು. ಅವರ ಜೀವನವೇ ಇದಕ್ಕೆ ಸಾಕ್ಷಿ. ಕೆಳಗೆ ನೋಡಬೇಡಿ, ಅಲ್ಲಿ ಕೊಳೆ ಇದೆ, ಕೆಸರಿದೆ ಎಂದು ತಪ್ಪುಕಂಡುಹಿಡಿಯಬೇಡಿ. ಕೆಸರಿನ ಲಕ್ಷಣವೇ ಅದು. ಆದರೆ ಮೇಲೆ ನೋಡಿ. ಆಗ ಭಗವಾನ್ ಸೂರ್ಯನನ್ನು ಕಾಣುತ್ತೀವೆ. ಕೆಳಗಿರುವುದನ್ನು ರಿಪೇರಿ ಮಾಡಲು ಹೋಗಬೇಡಿ. ಅದೇ ರಿಪೇರಿ ಆಗುವುದಕ್ಕೆ ಕಾಯುತ್ತಿಲ್ಲ. ಆದರೆ ನೀವು ಮೇಲೆ ನೋಡಿ ಆಗ ಭಗವಂತನ ದರ್ಶನ ನಮಗಾಗುವುದು.

•

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi•Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಇತರ ಕೆಲವು ಪ್ರಕಟಣೆಗಳು

ಶ್ರೀಮಾತೆ ಶಾರದಾದೇವಿ (ಸವಿಸ್ತಾರ ಜೀವನ)

ಶ್ರೀಶಾರದಾದೇವಿ ಸಂಭಾಷಣೆ

ಶ್ರೀ ಶಾರದಾದೇವಿ (ಜೀವನ)

ಶ್ರೀ ಶಾರದಾದೇವಿ (ಸಂಕ್ಷಿಪ್ತ ಜೀವನ)

PATITAPAVANE SARADA / Price : 2-00

Sri Vidyabharathi Book Centre, Sringeri